# 12-01-2026

# ರಾಷ್ಟ್ರೀಯ ಯುವ ದಿನಾಚರಣೆ



ವಿದ್ಯಾವರ್ಧಕ ಸಂಘ(ರಿ), ಮೈಸೂರು
**ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು**
ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು

ರಾಷ್ಟ್ರೀಯ ಸೇವಾ ಯೋಜನೆ ಘಟಕ

ರಾಷ್ಟ್ರೀಯ ಯುವ ದಿನಾಚರಣೆ



ಮುಖ್ಯ ಅತಿಥಿಗಳು
ಶ್ರೀ ಹಾಲೇಶ್ ಜೆಂಬಗಿ
ಕನ್ನಡ ಶಿಕ್ಷಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ ಯಾದವಗಿರಿ,
ಮೈಸೂರು



ಅಧ್ಯಕ್ಷತೆ
ಡಾ.ಎಸ್.ಮರೀಗೌಡ
ಪ್ರಾಂಶುಪಾಲರು

ಉಪಸ್ಥಿತಿ
ಪ್ರೊ. ಲಾವಣ್ಯ .ಎಸ್
ಅಧ್ಯಾಪಕ ಸಲಹೆಗಾರರು

ಉಪಸ್ಥಿತಿ
ಪ್ರೊ. ಸಿದ್ದರಾಜು.ಎಸ್
ಸಂಯೋಜನಾಧಿಕಾರಿ
ರಾ.ಸೇ.ಯೋ

**ದಿನಾಂಕ: 12.01.2026 I ಸಮಯ: 11 ಗಂಟೆಗೆ | ಸ್ಥಳ : ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ**

ವೇದಾಂತ ವಿಚಾರಗಳು ಕೇವಲ ಮತಮಾನ್ಯಗಳಿಗೆ ಸೀಮಿತವಾಗದೆ ಸರ್ವರಿಗೂ ತಲುಪುವಂತಾಗಬೇಕು. ಯಾವುದೇ ಒಬ್ಬ ವ್ಯಕ್ತಿ ಒಮ್ಮೆ ಸೋತಾಗ ಅವನು ಸೋಲುವುದಿಲ್ಲ, ಬದಲಿಗೆ ಪ್ರಯತ್ನವನ್ನೇ ಮಾಡದವನು ಸೋಲುತ್ತಾನೆ ಎಂದು ನಗರದ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಕನ್ನಡ ಶಿಕ್ಷಕ ಹಾಲೇಶ್ ಜೆಂಬಗಿ ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಐಕ್ಯೂಎಸಿ ಘಟಕ ಹಾಗೂ ರಾಷ್ಟ್ರೀಯ ಸೇವಾ ಯೋಜನಾ ಘಟಕ ಜಂಟಿಯಾಗಿ "ರಾಷ್ಟ್ರೀಯ ಯುವ ದಿನಾಚರಣೆ" ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. ಭಾರತ ದೇಶದ ಮಹಾನ್ ಶಕ್ತಿ ಎಂದರೆ ಅದು ಯುವಜನತೆ. ಹಾಗಾದರೇ ಯುವಕರು ಎಂದರೇ ಯಾರು? "ಯಾರಲ್ಲಿ ಕಲ್ಪನಾಶೀಲತೆ, ಉತ್ಸುಕತೆ, ಕ್ರಿಯಾಶೀಲತೆ ಇರುತ್ತದೆಯೋ ಅಂಥವರು ಯುವಕರು". ದೈಹಿಕ ಶಕ್ತಿ, ಮನಃಶಕ್ತಿ, ಏಕಾಗ್ರತೆಯನ್ನು ಪ್ರತಿ ಮನುಷ್ಯರು ಹೊಂದಬೇಕಾದುದು ಅತ್ಯಂತ ಅವಶ್ಯವಾಗಿದೆ. ಯಾವುದೇ ವ್ಯಕ್ತಿಯ ವ್ಯಕ್ತಿತ್ವ ಉನ್ನತವಾಗಿ ನಿರ್ಮಾಣವಾಗಬೇಕಾದರೇ ಶಿಕ್ಷಣ ಅತ್ಯಂತ ಅವಶ್ಯಕ.

ಬಾಲ್ಯದಿಂದಲೇ ವಿವೇಕಾನಂದರಿಗೆ ತಮ್ಮ ತಾಯಿಯ ಸಂಸ್ಕಾರದಿಂದ ಸ್ವಭಾವ, ಪ್ರಭಾವ, ಪರಿಣಾಮ ಇವುಗಳ ಪರಿಚಯವಾಗುತ್ತದೆ ಜೊತೆಗೆ ಸತ್ಯವನ್ನು ಶೋಧಿಸುವ ಮನೋಭಾವ, ಸಂಗೀತದಲ್ಲಿ ಏಕಾಗ್ರತೆ, ದುರ್ಬಲರ ಪರವಾಗಿ ಹೋರಾಟ ಮಾಡುವ ಮನೋಭಾವ ಚಿಕ್ಕಂದಿನಿಂದಲೇ ಇವರಿಗೆ ಸಿದ್ಧಿಸಿತ್ತು. ಹಾಗಾಗಿ ವಿವೇಕಾನಂದರು ತಮಗೆ ಸಿಕ್ಕ ಯಾರೇ ಗುರುಹಿರಿಯರಾಗಲಿ, ಸಾಧುಸಂತರಾಗಲಿ ಅವರಿಗೆ "ನೀವು ದೇವರನ್ನು ಕಂಡಿರುವಿರಾ?" ಎಂದು ಪ್ರಶ್ನಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಅವರಿಗೆ ಪರಿಚಯವಾದ ವಿಲಿಯಮ್ಸ್ ಯಾಸ್ಕಿಯವರು ಸಮಾಧಿ ಸ್ಥಿತಿಯಲ್ಲಿ ಬರುವ ಪೂರ್ಣ ಅನುಭವ ನಿಮ್ಮ ಬದುಕಿನ ದಿಕ್ಕು ದಿಸೆಯನ್ನು ಬದಲಾವಣೆ ಮಾಡುತ್ತದೆ ಎಂದರು. ಇದರಂತೆ ಮುಂದೆ ಇವರಿಗೆ ಗುರುವಾಗಿ ದೊರೆತ ಶ್ರೀರಾಮಕೃಷ್ಣ ಪರಮಹಂಸರು ಇವರ ಬದುಕಿನ ಬಹುದೊಡ್ಡ ಬದಲಾವಣೆಗೆ ಕಾರಣರಾದರು. ಪ್ರಪಂಚ ಪರ್ಯಟನೆ ಮಾಡುತ್ತಾ ಮೈಸೂರಿಗೆ 1892 ನವಂಬರ್‌ನಲ್ಲಿ ಆಗಮಿಸಿ ನಿರಂಜನ ಮಠದ ಅನಾಥಾಲಯದಲ್ಲಿ ತಂಗುತ್ತಾರೆ. ಜೊತೆಗೆ ಅಂದಿನ ಮೈಸೂರು ಅರಸರ ಜನಪರ ಕಾಳಜಿಯನ್ನು ಮೆಚ್ಚಿ ಬಹುವಾಗಿ ಕೊಂಡಾಡಿದ್ದರು. ಇಂದು ಅವರು ತಂಗಿದ್ದ ನಿರಂಜನ ಮಠವನ್ನು ಸ್ವಾಮಿ ವಿವೇಕಾನಂದರ ಸಾಂಸ್ಕೃತಿಕ ಯುವ ಕೇಂದ್ರವಾಗಿ ಮಾರ್ಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡುತ್ತಾ ವಿವೇಕಾನಂದರ ಪ್ರಸಿದ್ಧ ವಾಣಿಯಾದ "ಏಳಿ ಎದ್ದೇಳಿ ಗುರಿಮುಟ್ಟುವ ತನಕ ನಿಲ್ಲದಿರಿ" ಎನ್ನುವ ಮಾತಿನಂತೆ ವಿದ್ಯಾರ್ಥಿಗಳು ಸದಾ ಅಧ್ಯಯನ ನಿರತರಾಗಿದ್ದು ಉನ್ನತ ಸಾಧನೆಯನ್ನು ಮಾಡಿ ಕಾಲೇಜಿಗೆ ಹಾಗೂ ನಿಮ್ಮ ತಂದೆ ತಾಯಂದಿರಿಗೆ ಕೀರ್ತಿಯನ್ನು ತಂದುಕೊಡುವಂತ ಕೆಲಸವನ್ನು ಮಾಡುವ ದಿಸೆಯಲ್ಲಿ ಕಾರ್ಯೋನ್ಮುಖರಾಗಿ ಎಂದು ಕರೆನೀಡಿದರು.

ರಾ.ಸೇ.ಯೋ ಸ್ವಯಂ ಸೇವಕ ಮನೋಜ್ ಪ್ರಾರ್ಥಿಸಿದ ಕಾರ್ಯಕ್ರಮವನ್ನು ಕು.ಕೀರ್ತನ ಸ್ವಾಗತಿಸಿದರು. ರಾ.ಸೇ.ಯೋ ಕಾರ್ಯಕ್ರಮಾಧಿಕಾರಿ ಪ್ರೊ.ಸಿದ್ಧರಾಜು.ಎಸ್, ಅಧ್ಯಾಪಕ ಸಲಹೆಗಾರರಾದ ಪ್ರೊ.ಲಾವಣ್ಯ.ಎಸ್, ರಾ.ಸೇ.ಯೋ ಸ್ವಯಂ ಸೇವಕರು ಹಾಜರಿದ್ದ ಕಾರ್ಯಕ್ರಮವನ್ನು ಕು.ತೇಜಸ್ವಿನಿ ನಿರೂಪಿಸಿ, ಕು.ಶ್ರೇಯಶ್ರೀ ವಂದಿಸಿದರು.






GPS Map Camera
Google
Mysuru, Karnataka, India
Ashraya Complex, Physican And Diabetologist, Seshadri
Iyer Road, Near Private Bus Stand, Medar Block,
Yadavagiri, Mysuru, Karnataka 570001, India
Lat 12.318108° Long 76.648722°
Monday, 12/01/2026 11:23 AM GMT +05:30






























ಶ್ರೀ.ಹಾಲೇಶ್ ಚೆಂಬಗಿ
ಡಾ.ಎಸ್.ಮರೀಗೌಡ


GPS Map Camera
Google
Mysuru, Karnataka, India
Ashraya Complex, Physican And Diabetologist, Seshadri Iyer Road, Near Private Bus Stand, Medar Block, Yadavagiri, Mysuru, Karnataka 570001, India
Lat 12.318092° Long 76.648696°
Monday, 12/01/2026 11:23 AM GMT +05:30









